# ಲೋಲ್‌ಬಾಗ್‌ನ ನಗೆ ದಳಗಳು



ಪವನ್ ವೇಣುಗೋಪಾಲ್

ಇದು STAND UP COMEDY ಟೀಂ

**ಕೃಷ್ಣೇಗೌಡರು, ಪ್ರಾಣೇಶ್, ಹಿರೇಮಗಳೂರು ಕಣ್ಣನ್, ಸುಧಾ ಬರಗೂರು, ರಿಚರ್ಡ್ ಲೂಯಿಸ್ ಮುಂತಾದವರು ಹಾಕಿಕೊಟ್ಟ ಹಾಸ್ಯದ ಹಾಯಿದೋಣಿಯ ಮೇಲೆ ಇನ್ನಷ್ಟು ದೂರ ಚಲಿಸುವ ಹಂಬಲದಲ್ಲಿ ಹುಟ್ಟಿಕೊಂಡ ಲೋಲ್‌ಬಾಗ್ ನಗೆತಂಡ, ಬೆಂಗಳೂರಿನ ಜನಪ್ರಿಯ ಸ್ಟ್ಯಾಂಡ್ ಅಪ್ ಕಾಮಿಡಿ ತಂಡವಾಗಿ ರೂಪುಗೊಂಡಿದೆ.**

**Lolbagh** ಹೀಗೊಂದು ಕ್ಯಾಚಿ ಆದ ಹೆಸರನ್ನಿಟ್ಟುಕೊಂಡ ಸ್ಟ್ಯಾಂಡ್–ಅಪ್ ಕಾಮಿಡಿ ತಂಡ ಬೆಂಗಳೂರಿನಲ್ಲಿ ಎರಡೂಮುಕ್ಕಾಲು ವರ್ಷಗಳಿಂದ ಸಕ್ರಿಯವಾಗಿದೆ. ಅನೂಪ್ ಮಯ್ಯ ಶುರುಮಾಡಿದ ಈ ತಂಡದ ಮುಖ್ಯ ಹಾಸ್ಯಗಾರರಲ್ಲಿ ಪವನ್ ವೇಣುಗೋಪಾಲ್ ಕೂಡ ಒಬ್ಬರು. ಸಿಡ್ನಿ ಪ್ರವಾಸದಲ್ಲಿದ್ದ ಅನೂಪ್ ಮಾತನಾಡಲು ಬ್ಯಾಟನ್ ಅನ್ನು ಪವನ್ ಕೈಗೆ ಕೊಟ್ಟರು. 'ಸುಧಾ' ಜತೆಗೆ ಪವನ್ ಅಸ್ಖಲಿತ ಕನ್ನಡದಲ್ಲಿ ಮಾತನಾಡತೊಡಗಿದರು.

'ಕೃಷ್ಣೇಗೌಡರು, ಪ್ರಾಣೇಶ್, ಹಿರೇಮಗಳೂರು ಕಣ್ಣನ್, ಸುಧಾ ಬರಗೂರು, ರಿಚರ್ಡ್ ಲೂಯಿಸ್ ಇವರೆಲ್ಲ ಈಗಾಗಲೇ ಹಾಸ್ಯದ ಪಂಕ್ತಿ ಹಾಕಿಕೊಟ್ಟಿದ್ದಾರೆ. ಅದೇ ಹಾದಿಯಲ್ಲಿ ನಮ್ಮದು ಹೊಸ ಪಯಣವಷ್ಟೆ' ಎಂದು ವಿನಯದಿಂದ ಹೇಳಿದರು ಪವನ್.

ನಗೆಹಬ್ಬ ಮಾಡುತ್ತಿದ್ದ ಈ ಹಿರೀಕರು ಕುಟುಂಬ, ಮದುವೆ, ಸಂಬಂಧಗಳಿಗೇ ಸೀಮಿತವಾದ ಹಾಸ್ಯ ರಸಾಯನವನ್ನು ಕೊಡುತ್ತಿದ್ದರು. ನಗರ ಸಂವೇದನೆಯ ವಿಷಯಗಳನ್ನು ಹಾಸ್ಯಕ್ಕೆ ಒಗ್ಗಿಸಲು 'ಲಾಲ್‌ಬಾಗ್' (ಲೋಲ್‌ಬಾಗ್ ಎಂದೂ ತಮಾಷೆಯಾಗಿ ಹೇಳಬಹುದು) ನಿರ್ಧರಿಸಿತು. ಫೇಸ್‌ಬುಕ್, ಐಟಿ, ಬ್ರೇಕ್‌ಅಪ್, ಟ್ರಾಫಿಕ್ ಜಾಮ್ ಇಂಥ ನಗರದಲ್ಲಿ ಒದಗಿಬರುವ ಸಂದರ್ಭಗಳನ್ನು ಸೃಷ್ಟಿಸಿ ಅದನ್ನೇ ಹಾಸ್ಯವಾಗಿಸಿತು.

ಕಲಬುರ್ಗಿಯ ಕಾರ್ತಿಕ್ ಪತ್ತಾರ್, ರಾಯಚೂರಿನ ಹಂಪಕುಮಾರ್, ಬೆಂಗಳೂರಿನವರೇ ಆದ ಸುದರ್ಶನ್ ರಂಗಪ್ರಸಾದ್ ಈ ತಂಡದ ಸಕ್ರಿಯ ಹಾಸ್ಯಗಾರರು. ಪವನ್, ಸುದರ್ಶನ್ ಇಬ್ಬರೂ ಸಾಫ್ಟ್‌ವೇರ್ ಎಂಜಿನಿಯರ್‌ಗಳು. ಉಳಿದವ್ರೂ ಬೇರೆ ಬೇರೆ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

'ಕಾರ್ತಿಕ್, ಹಂಪಕುಮಾರ್ ಇಬ್ಬರೂ ನಮಗೆ ಬೇರೆ ಆ್ಯಕ್ಸೆಂಟ್ ನೀಡುತ್ತಾರೆ. ಹೀಗಾಗಿ ಪ್ರೇಕ್ಷಕರನ್ನು ಹಿಡಿದು ಕೂರಿಸಲು ಬೇಕಾದ ವೆರೈಟಿ ಸಿಕ್ಕಿದೆ. ಆಮೇಲೆ ಸೀಮಾ ರಾವ್ ಎಂಬ ಮಂಗಳೂರಿನವರೂ ನಮ್ಮ ತಂಡ ಸೇರಿಕೊಂಡರು. ಇತ್ತೀಚೆಗೆ ಕಿರುತೆರೆಯ






'ಲೋಲ್‌ಬಾಗ್' ನಗೆದಳಗಳು